## ದಿನಾಂಕ:29-10-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 15 (124)/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಜೆ.ನರ್ಮ್ ಯೋಜನೆ ಮತ್ತು ಶೇ.22.75% ರ ಕಲ್ಯಾಣ ಯೋಜನೆ ಅಡಿಯಲ್ಲಿ ಬರುವ ಹಲವಾರು ವಸತಿ ಯೋಜನೆಗಳ ನಿರ್ಮಾಣ ಕೈಗೊಂಡಿದ್ದು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಫಲಾನುಭವಿಗಳು ವಸತಿ ನಿರ್ಮಾಣಕ್ಕೆ ವೆಚ್ಚ ಶೇ.10% ರಷ್ಟನ್ನು ನಗರ ಪಾಲಿಕೆಗೆ ಸಂದಾಯ ಮಾಡಬೇಕಾಗಿರುವುದು ಕಡ್ಡಾಯವಾಗಿರುತ್ತದೆ.

ಆದರೆ, ವಾಸ್ತವಿಕವಾಗಿ ಫಲಾನುಭವಿಗಳು ಮೇಲ್ಕಂಡ ವಂತಿಕೆ ಹಣವನ್ನು ಸಂದಾಯ ಮಾಡಲು ವಿಳಂಬ ಮಾಡುತ್ತಿದ್ದು, ಕಾರ್ಯ ಯೋಜನೆಯ ಪ್ರಗತಿಯು ಕುಂಠಿತವಾಗಿರುತ್ತದೆ.

ಆದುದರಿಂದ, ಮೇಲ್ಕಂಡ ಯೋಜನೆಗಳಲ್ಲಿ ವಸತಿ ನಿರ್ಮಾಣ/ವಸತಿ ಘಟಕಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಹಸ್ತಾಂತರಿಸುವ ಸಂದರ್ಭದಲ್ಲಿ ಪಾವತಿ ಮಾಡದೇ ಇರುವ ಫಲಾನುಭವಿಗಳ ಶೇ.10% ವಂತಿಕೆ ಹಣವನ್ನು ಪಾಲಿಕೆಯು ಶೇ.22.75% ರ ಅನುದಾನದ ಕಲ್ಯಾಣ ಶೀರ್ಷಿಕೆ ಅಡಿಯಲ್ಲಿ ಭರಿಸಬಹುದಾಗಿರುತ್ತದೆ.

ಜೆ.ನರ್ಮ್ ಯೋಜನೆ ಮತ್ತು ಕಲ್ಯಾಣ ಯೋಜನೆ ಅಡಿಯಲ್ಲಿ ಈಗ ಹಾಲಿ 369 ಮತ್ತು 9229 ಸಂಖ್ಯೆ ಮನೆಗಳನ್ನು ನಿರ್ಮಾಣ ಮಾಡುತ್ತಿದ್ದು, ಈ ಯೋಜನೆಯಡಿ ವಸತಿಯನ್ನು ಒದಗಿಸುವ ಎಲ್ಲಾ ಫಲಾನುಭವಿಗಳಿಗೆ ಈ ಸವಲತ್ತನ್ನು ಕಲ್ಪಿಸಿಕೊಡಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-08-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:12-10-2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ. ನಟರಾಜ)**

ಮಹಾಪೌರರು